# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 158/2017
CW-02 PW-03

ಹೆಸರು : ಗೋಪಾಲ ಚವ್ಹಾಣ

ತಂದೆ ಹೆಸರು : ಹಣಮಂತ

ವಯಸ್ಸು : 50 ವರ್ಷ

ಉದ್ಯೋಗ : ಪಂಕ್ಚರ ಅಂಗಡಿ

ವಾಸ ಸ್ಥಳ : ಕಾಳಗಿ

---

**<u>ಪ್ರಮಾಣವಚನ ಭೋಧಿಲಾಯಿತು. ದಿಃ 13-09-2023</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ನನಗೆ ಚಾಸಾಃ 03 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸುಮಾರು 5-6 ವರ್ಷಗಳ ಹಿಂದೆ ನಾನು ಕಾಳಗಿಯಿಂದ ಸೂಗುರುಗೆ ಹೋಗುವಾಗ ಪೊಲೀಸರು ಮಾರ್ಗಮಧ್ಯದಲ್ಲಿ ನಿಂತಿದ್ದು, ಸದರಿಯವರು ಒಂದು ದಾಖಲೆಗೆ ನನಗೆ ಸಹಿ ಮಾಡಲು ಹೇಳಿದ್ದರಿಂದ ನಾನು ಒಂದು ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ.

ಸಾಕ್ಷಿಯು ನಿಪಿ-2 ರ ಘಟನಾ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>**

ದಿನಾಂಕ 24-11-2016 ರಂದು ಮಧ್ಯಾಹ್ನ 12.30 ರಿಂದ 01.30 ರ ಸಮಯದವರೆಗ ಪೋಲಿಸರು ನಿಪಿ-02 ರಂತೆ ಪಂಚನಾಮೆ ಕ್ರಮ ಜರುಗಿಸಿ, ಘಟನಾ ಸ್ಥಳವನ್ನು ತೋರಿಸಿ ನನ್ನ ಹೆಬ್ಬಟ್ಟಿನ ಗುರುತನ್ನು ನಿಪಿ-02 ಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-02 ರಲ್ಲಿ ಬರೆದಿರುವ ವಿಷಯಗಳು ನನಗೆ ಗೋತ್ತಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ CBA ವಕೀಲರಿಂದ - ಏನು ಇಲ್ಲಾ</u>**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.